(ಗೊಂದಲ)

ಶ್ರೀಮತಿ ಮೋಟಮ್ಮ:– ನಿನ್ನೆ ದಿವಸ ಆ ಕಡೆ ಸದಸ್ಯರೆಲ್ಲ ಟೈಮ್ ಸಾಕಾಗಲಿಲ್ಲ ಅಂತ ಹೇಳಿ ಸಾಕಷ್ಟು ಗೊಂದಲ ಎಬ್ಬಿಸಿದ್ದಾರೆ. ಈಗ ಸುಮ್ಮನೇ ಕಾಲಹರಣ ಮಾಡುತ್ತಿರುವುದಕ್ಕೆ ಅರ್ಥ ಇಲ್ಲವೆಂದು ಹೇಳಿ ಮುಂದಿನ ಪ್ರಶ್ನೆ ಕೇಳಲಿಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಭೀಮಣ್ಣ ಖಂಡ್ರೆ:– ನಾವು ಏನು ಹೇಳಿದೆವು. ಅದನ್ನು ಮಾಡುತ್ತೇವೆ ವಿನಹ ಸುಳ್ಳು ಹೇಳೋದಿಲ್ಲ, ಆ ಅಭ್ಯಾಸ ನಿಮಗಿರಬಹುದು ನಮಗಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಅಧ್ಯಕ್ಷಿಣಿಯವರೇ ಅದನ್ನು ಸದನದ ಟೇಬಲ್ ಮೇಲಿಟ್ಟು ಬಿಡಿ.

MADAM DEPUTY SPEAKER:– It will be placed on the table of the House.

SRI BHEEMANNA KHANDRE:– Now are you satisfied.

SRI RAMAKRISHNA HEGDE:– I am saying it in your own interest. ನೀವು ಹಿಂದಿನ ಮುಖ್ಯಮಂತ್ರಿಗಳನ್ನು ಬದಲಾಯಿಸಿ ಬಂದದ್ದು ಶಸ್ತ್ರಕ್ರಿಯೆ ಮಾಡಲಿಕ್ಕೆ. ಅದಕ್ಕಾಗಿ ನಾನು ಹೇಳುತ್ತೇನೆ, ಇದರಲ್ಲಿ ಹಿಂದೆ ಮುಂದೆ ನೋಡಬೇಡಿ, ಸತ್ಯ ಹೊರಕ್ಕೆ ಹಾಕಿ.

ಉಪಾಧ್ಯಕ್ಷಿಣಿಯವರು :– ಈಗ ಆತ್ಮಾನಂದ ಅವರು ಕೇಳಲಿ. Let him give. You can come and take it from my office.

ಮಂಡ್ಯ ಜಿಲ್ಲೆಯಲ್ಲಿನ ಗ್ರಾಮಾಂತರ ಪ್ರದೇಶದ ಸಾರಿಗೆ ವ್ಯವಸ್ಥೆ ಮತ್ತು ಬಸ್ ನಿಲ್ದಾಣಗಳು.

444. ಶ್ರೀ. ಎಂ.ಎಸ್. ಆತ್ಮಾನಂದ (ಮಂಡ್ಯ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯ ಜಿಲ್ಲೆಯಲ್ಲಿನ ಗ್ರಾಮಾಂತರ ಪ್ರದೇಶದಲ್ಲಿನ ಸಾರಿಗೆ ವ್ಯವಸ್ಥೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ಕೊರತೆ ನಿವಾರಿಸಲು ಸರ್ಕಾರವು ಏನು ಕ್ರಮ ಕೈಗೊಂಡಿದೆ ?

ಇ) ಮಂಡ್ಯ ಜಿಲ್ಲೆಯಲ್ಲಿನ ತಾಲ್ಲೂಕು ಕೇಂದ್ರ ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ಯಾವ ಯಾವ ಸ್ಥಳಗಳಲ್ಲಿ ಬಸ್ ನಿಲ್ದಾಣಗಳನ್ನು ನಿರ್ಮಿಸಲಾಗುತ್ತಿದೆ ?

ಈ) ಮಂಡ್ಯ ಜಿಲ್ಲೆಯಲ್ಲಿ ಒಟ್ಟು ಎಷ್ಟು ಬಸ್ ಡಿಪೋಗಳಿವೆ ?

ಉ) ಮಂಡ್ಯ ನಗರದಲ್ಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವನ್ನು ಅಭಿವೃದ್ಧಿ ಪಡಿಸಲು ಕಾರ್ಯಕ್ರಮ ರೂಪಿಸಲಾಗಿದೆಯೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಇಲ್ಲಾ

ಆ) ಉದ್ಭವಿಸುವುದಿಲ್ಲ.

ಇ) ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಹಾಗೂ ಮಳವಳ್ಳಿ ತಾಲ್ಲೂಕು ಕೇಂದ್ರಗಳಲ್ಲಿ ಬಸ್ ನಿಲ್ದಾಣ ನಿರ್ಮಿಸಲಾಗುತ್ತಿದೆ.

ಈ) ಒಂದು

ಉ) ಇಲ್ಲಾ.

ಶ್ರೀ ಎಂ.ಎಸ್. ಆತ್ಮಾನಂದ:– ಸನ್ಮಾನ್ಯ ಅಧ್ಯಕ್ಷಣಿಯವರೇ, ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಮಂಡ್ಯ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಸಾರಿಗೆ ವ್ಯವಸ್ಥೆಯಲ್ಲಿ ಬಸ್ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ನಾನೀಗ ಸರ್ಕಾರದ ಗಮನಕ್ಕೆ ತರುತ್ತಾ ಇದ್ದೇನೆ. ನಮ್ಮ ಜಿಲ್ಲೆಯ ಗ್ರಾಮಾಂತರ ಪ್ರದೇಶದ ಬಸ್‌ನ ವ್ಯವಸ್ಥೆ ಬಹಳಷ್ಟು ಸುಧಾರಣೆಯಾಗಬೇಕು. ಉದಾಹರಣೆಗೆ ಮಂಡ್ಯದಿಂದ ಮದ್ದೂರಿಗೆ ನಾವು ಪ್ರಯಾಣ ಮಾಡಬೇಕಾದರೆ ಬಹಳ ಕಾಲ ತೆಗೆದುಕೊಳ್ಳುತ್ತದೆ. ಅಲ್ಲಿನ ಡಿಪೋದಲ್ಲಿ ಕೇಳಿದರೆ ಸಿಬ್ಬಂದಿ ಇಲ್ಲ ಬಸ್ ಇಲ್ಲಾ ಎಂದು ಹೇಳ್ತಾರೆ. ಈ ಕೊರತೆಯನ್ನು ನಿವಾರಿಸಲು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಮ್ಮ ಮೂಲಕ ಅವರನ್ನು ಕೇಳಬಯಸುತ್ತೇನೆ. ಮಂಡ್ಯ ಜಿಲ್ಲೆಯ ಬಸ್ ನಿಲ್ದಾಣದ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಲಾಗಿದೆಯೇ ಎಂದು ಕೇಳಿದರೆ ಇಲ್ಲಾ ಎಂದು ಹೇಳಿದ್ದಾರೆ. ಇದು ಬಹಳ ಶೋಚನೀಯವಾದ ಉತ್ತರ ಎಂದು ನನ್ನ ಅನಿಸಿಕೆ. ಕಾರಣ ಇಷ್ಟೇ. ನಾನು ಹಿಂದೆ ಸಾರಿಗೆ ಸಚಿವರಾಗಿದ್ದ ಶ್ರೀ ಅಜೀಜ್‌ಸೇಠ್‌ರವರನ್ನು ಕರೆದುಕೊಂಡು ಹೋಗಿ ವರಿಷ್ಠ ಅಧಿಕಾರಿಗಳೊಡನೆ ಆ ನಿಲ್ದಾಣಕ್ಕೆ ಭೇಟಿ ನೀಡಿ ಅದನ್ನು ಅಭಿವೃದ್ಧಿಗೊಳಿಸಬೇಕೆಂದು ಕೇಳಿದ್ದರೂ ಸಹ ಕಾರ್ಯಕ್ರಮ ಇಲ್ಲ ಎಂದು ಹೇಳಿದ್ದಾರೆ. ಈ ಅಭಿವೃದ್ಧಿ ಕಾರ್ಯಕ್ರಮ ಯಾವಾಗ ತೆಗೆದುಕೊಳ್ತೀರಿ. ಈಗಾಗಲೇ ಏನಾದರೂ ಕಾರ್ಯಕ್ರಮ ರೂಪಿತವಾಗಿದೆಯೇ ಎಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:– ಮಾನ್ಯ ಉಪಾಧ್ಯಕ್ಷಣಿಯವರೇ, ತಮಗೆ ಏನು ಅವಶ್ಯಕತೆ ಇದೆ, ಅಷ್ಟನ್ನು ನಾವು ಕೊಟ್ಟಿದ್ದೇವೆ. 46 ಬಸ್‌ಗಳು ಮೊದಲು ಇದ್ದದ್ದು. ಈಗ ಅದನ್ನು 12 ಹೆಚ್ಚು ಮಾಡಿದ್ದೇವೆ 1990–91ರಲ್ಲಿ. 1991–92ರಲ್ಲಿ 55 ಇದ್ದದ್ದು ಮತ್ತೆ 9 ಹೆಚ್ಚು ಮಾಡಿದ್ದೇವೆ. 92ರಲ್ಲಿ 66 ಇದ್ದದ್ದು ಅದನ್ನು ಈಗ 11 ಹೆಚ್ಚು ಮಾಡಿದ್ದೇವೆ. ಇನ್ನು ಬೇಕಾದರೆ ನಾವು ತನಿಖೆಯನ್ನು ಮಾಡಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುವ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ:– ನಾನು ಬಸ್ ನಿಲ್ದಾಣದ ಅಭಿವೃದ್ಧಿ ಬಗ್ಗೆ ಕೇಳಿದೆ.

ಶ್ರೀ ಭೀಮಣ್ಣ ಖಂಡ್ರೆ:– ಈಗಾಗಲೇ ಎರಡು ಸ್ಥಳಗಳಲ್ಲಿ ಬಸ್ ನಿಲ್ದಾಣ ಶುರುವಾಗಿದೆ. ನಾವು ಸ್ಟಾಪ್ ಮಾಡಿದ್ದೇವೆ. ಒಂದು ಶ್ರೀರಂಗಪಟ್ಟಣ.

ಶ್ರೀ ಎಂ.ಎಸ್. ಆತ್ಮಾನಂದ:– ನಾನು ಕೇಳಿದ್ದುದು ಮಂಡ್ಯ ನಗರದ ಬಸ್ ನಿಲ್ದಾಣದ ಬಗ್ಗೆ.

ಶ್ರೀ ಭೀಮಣ್ಣ ಖಂಡ್ರೆ:– ಮಂಡ್ಯದಲ್ಲಿ ಹಳೆಯ ಬಸ್ ಸ್ಟ್ಯಾಂಡ್ ಇಂಪ್ರೂವ್ ಮಾಡುವುದಕ್ಕೆ ಪ್ರಯತ್ನವನ್ನು ನಾವು ಮಾಡುತ್ತೇವೆ. ಹೊಸ ನಿಲ್ದಾಣದ ಬಗ್ಗೆ ಕೇಳಿದ್ದೀರಿ, ಹೊಸದು ಅವಶ್ಯಕತೆ ಇಲ್ಲ. ಏನಾದರೂ ಹಳೆಯದರಲ್ಲಿ ಕೊರತೆ ಇದ್ದರೆ ಅದನ್ನು ರಿಪೇರಿ ಮಾಡಿ ಇಂಪ್ರೂವ್ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀಮತಿ ಮಲ್ಲಾಜಮ್ಮ:– ಮಾನ್ಯ ಉಪಾಧ್ಯಕ್ಷಣಿಯವರೇ ಮಂಡ್ಯದಿಂದ ಮಳವಳ್ಳಿಗೆ ಹೋಗತಕ್ಕಂಥ ಗ್ರಾಮಾಂತರ ಪ್ರದೇಶದ ಬಸ್‌ಗಳಲ್ಲಿ ಅದರಲ್ಲೂ ಖಾಸಗೀ ಬಸ್‌ಗಳ ಟಾಪ್‌ಗಳ ಮೇಲೆ ಜನರು ಕುಳಿತುಕೊಂಡು ಹೋಗುತ್ತಿರುತ್ತಾರೆ. ಹಲವಾರು ಸಾರಿ ಈ ವಿಚಾರವನ್ನು

ಮಾನ್ಯಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇನೆ. ಈಗ ಹಾಕಿರತಕ್ಕಂಥ ಎರಡು ಬಸ್‌ಗಳು ಸಾಲುವುದಿಲ್ಲ. ಅಲ್ಲಿ ಪ್ರಮುಖವಾಗಿ ಮಧ್ಯದಾಳೇಶ್ವರ ಎನ್ನುವ ಒಂದು ದೇವಸ್ಥಾನ ಇದೆ. ಆ ಭಾಗಕ್ಕೆ ಬಸ್‌ನ್ನು ಕಳುಹಿಸಿ ಕೊಡಿ ಎಂದು ಎರಡು ಪತ್ರಗಳನ್ನು ಬರೆದಿದ್ದೇನೆ. ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಭೀಮಣ್ಣ ಖಂಡ್ರೆ:– ಪತ್ರವನ್ನು ಬರೆದಿದ್ದೀರಿ. ಅದನ್ನು ತನಿಖೆ ಮಾಡಿಸುತ್ತಿದ್ದೇವೆ. ಸಾಧ್ಯವಾದಷ್ಟು ಹೆಚ್ಚು ಬಸ್‌ಗಳನ್ನು ಅಲ್ಲಿಗೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ:– ಮೂರು ವರ್ಷಗಳಿಂದ ನಾವು ಬಸ್‌ನ ಅವಶ್ಯಕತೆ ಬಗ್ಗೆ ನಿಮ್ಮ ಇಲಾಖೆಗೆ ಕಾಗದಗಳನ್ನು ಬರೆದಿದ್ದೇವೆ. ನಿಮ್ಮ ಇಲಾಖೆಯವರು ಮೈಸೂರು – ಬೆಂಗಳೂರು ಕಮ್ಯೂಟರ್ಸ್ ನೆನಪಿನಲ್ಲಿಟ್ಟುಕೊಂಡು ನಾನ್‌ಸ್ಟಾಪ್ ಬಸ್ ಕಡೆ ಗಮನವನ್ನು ಕೊಡುತ್ತಿದ್ದಾರೆಯೇ ಹೊರತು ನಮ್ಮ ಗ್ರಾಮಾಂತರ ಪ್ರದೇಶದ ಬಸ್‌ನ ವ್ಯವಸ್ಥೆಯಾಗಿಲ್ಲ. ತಾವು ದಯವಿಟ್ಟು ವರದಿಯನ್ನು ತರಿಸಿ ನಮ್ಮ ಕಾಗದದ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೀರಾ ?

ಶ್ರೀ ಭೀಮಣ್ಣ ಖಂಡ್ರೆ:– ಮಾಡಿಸುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ:– ಮಂಡ್ಯ ಜಿಲ್ಲೆಯಲ್ಲಿ ಪ್ರಸ್ತುತ ಒಂದೇ ಬಸ್ ಡಿಪೋ ಇದೆ. ಜಿಲ್ಲೆ ಸಾಕಷ್ಟು ದೊಡ್ಡದಾಗಿದ್ದು ಬೇರೆ ಯಾವುದಾದರೂ ಒಂದು ತಾಲ್ಲೂಕು ಕೇಂದ್ರದಲ್ಲಿ ಒಂದು ಬಸ್ ಡಿಪೋವನ್ನು ಮಾಡುವುದಕ್ಕೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:– ಈಗ ಉತ್ತರ ಕೊಟ್ಟೆ. ಹಣದ ಕೊರತೆ ಇದೆ. ಈಗ ಸಧ್ಯದಲ್ಲಿ ಇದು ಆಗುವುದಕ್ಕೆ ಸಾಧ್ಯವಿಲ್ಲ. ನಿಮ್ಮದು ಈಗಾಗಲೇ ಇದ್ದದ್ದು ಏನು ಇದೆ, ಅದಕ್ಕೆ ಮಾತ್ರ ರಿಪೇರಿ ಮಾಡಿ ಸರಿ ಮಾಡಿಸುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮುಂದೆ ಹಣ ಬಂದಾಗ ಅಥವಾ ನಮ್ಮಲ್ಲಿ ಹಣ ಹೆಚ್ಚಾದಾಗ ನಾವು ಇದನ್ನು ವಿಚಾರ ಮಾಡುತ್ತೇವೆ.

ರಾಜ್ಯದ ಸಾರಿಗೆ ಸಂಸ್ಥೆಯ ಖಾಸಗೀಕರಣ.

7. ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಸಾರಿಗೆ ಸಂಸ್ಥೆಯನ್ನು ಖಾಸಗೀಕರಣಗೊಳಿಸುವ ಬಗ್ಗೆ ಸರ್ಕಾರದವರ ನಿಲುವೇನು ?

ಆ) ಈಗ ಖಾಸಗೀ ವಲಯದಲ್ಲಿ ಸಂಚರಿಸುತ್ತಿರುವ ಬಸ್ಸುಗಳೆಷ್ಟು ಹಾಗೂ ಸರ್ಕಾರದ ಸಾರಿಗೆ ಸಂಸ್ಥೆಯ ಒಡೆತನದಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ.

ಆ) ಖಾಸಗೀ ವಲಯಗಳಲ್ಲಿ ಸಂಚರಿಸುತ್ತಿರುವ ಬಸ್ಸುಗಳ ಸಂಖ್ಯೆ: 3238.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ದಿನಾಂಕ: 21–11–92ಕ್ಕೆ 8606 ಬಸ್ಸುಗಳನ್ನು ಓಡಿಸುತ್ತಿದೆ.

ಶ್ರೀ ಕೆ. ಹರ್ಷಕುಮಾರ ಗೌಡ:– ಮಾನ್ಯ ಉಪಾಧ್ಯಕ್ಷಿಣಿಯವರೇ, ರಾಜ್ಯದಲ್ಲಿ ಸಾರಿಗೆ ಸಂಸ್ಥೆಯ ಈ ವ್ಯವಸ್ಥೆಯಲ್ಲಿ ಖಾಸಗೀಕರಣ ಮಾಡುತ್ತೇವೆ ಎಂದು ಸರ್ಕಾರ ಹೇಳಿಕೊಂಡು ಬಂದಿತ್ತು. ಕಳೆದ